2017 ಕ.ತೀ.ವ. 1241

## ಸನ್ಮಾನ್ಯ ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ

## ಆಸಿಫ್ ಪಾಷಾ ಮತ್ತು ಮತ್ತೊಬ್ಬರು –ವಿರುದ್ಧ– ಆಯುಕ್ತರು, ಮೈಸೂರು ನಗರ ಪಾಲಿಕೆ*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಅರ್ಜಿಗಳು.

ಬೀದಿ ವ್ಯಾಪಾರಿಗಳ (ಜೀವನ ಸಂರಕ್ಷಣೆ ಮತ್ತು ಬೀದಿ ವ್ಯಾಪಾರದ ವಿನಿಯಮ) ಅಧಿನಿಯಮ, 2014.

ಈ ಎರಡೂ ರಿಟ್ ಅರ್ಜಿಗಳಲ್ಲಿನ ಅರ್ಜಿದಾರರು, ತಾವು ಬೀದಿ ವ್ಯಾಪಾರಿಗಳಾಗಿದ್ದು, ಮೈಸೂರು ನಗರ ಪಾಲಿಕೆಯ ಸಾರ್ವಜನಿಕ ಸ್ಥಳಗಳಲ್ಲಿ ಸಣ್ಣದಾದ ತಾತ್ಕಾಲಿಕ ನಿರ್ಮಿತಿಗಳನ್ನು ಅಥವಾ ಷೆಡ್ಡುಗಳನ್ನು ನಿರ್ಮಿಸಿಕೊಂಡು ತಮ್ಮ ವ್ಯಾಪಾರವನ್ನು ಮಾಡುತ್ತಿರುತ್ತೇವೆ ಹಾಗು ಇತ್ತೀಚೆಗೆ ಅಧಿನಿಯಮಿತಗೊಳಿಸಿದ ಅಧಿನಿಯಮ ಅಂದರೆ ..., ಬೀದಿ ವ್ಯಾಪಾರಿಗಳು (ಜೀವನ ಸಂರಕ್ಷಣೆ ಹಾಗು ಬೀದಿ ವ್ಯಾಪಾರದ ವಿನಿಯಮ) ಅಧಿನಿಯಮ, 2014 ರಡಿಯಲ್ಲಿ ರಕ್ಷಣೆಗೆ ಹಕ್ಕುಳ್ಳವರಾಗಿದ್ದು, ನಾವು ಬಡ ಸ್ವಉದ್ಯೋಗಿಗಳಾಗಿದ್ದು ನಮ್ಮ ದೈನಂದಿನ ವ್ಯಾಪಾರ ನಿರ್ವಹಣೆಯ ಸ್ಥಳದಿಂದ ಪ್ರತ್ಯರ್ಜಿದಾರ ಮೈಸೂರು ನಗರ ಪಾಲಿಕೆಯು ಆಗಾಗ ನಮ್ಮನ್ನು ಮೇಲೆ ಹೇಳಿದ ಸ್ಥಳಗಳಿಂದ ಹೊರಹಾಕುತ್ತಿರುತ್ತದೆಂಬ ಕ್ಲೇಮಿನೊಂದಿಗೆ ಅರ್ಜಿ ಸಲ್ಲಿಸಿರುತ್ತಾರೆ.

2014 ರ ಅಧಿನಿಯಮದ ಪ್ರಸ್ತಾವನೆ, ಉದ್ದೇಶ ಹಾಗು ಕಾರಣಗಳ ಹೇಳಿಕೆ ಹಾಗು ಸದರಿ ಅಧಿನಿಯಮದ ಹಲವು ಉಪಬಂಧಗಳು 'ಬೀದಿ ವ್ಯಾಪಾರಿಗಳ' ಪರಿಭಾಷೆಯನ್ನು

* ರಿಟ್ ಅರ್ಜಿ ಸಂ. 28461–462/2015 (ಎಲ್‌ಬಿ–ಆರ್‌ಇಎಸ್), ಇದರೊಂದಿಗೆ ಇತರೆ, ದಿನಾಂಕ: 14ನೇ ಜೂನ್ 2016.

ವಿವರಿಸುತ್ತವೆ; II ನೇ ಅಧ್ಯಾಯದಲ್ಲಿನ 3 ಹಾಗು 4ನೇ ಪ್ರಕರಣಗಳು ಬೀದಿ ವ್ಯಾಪಾರಿಗಳ ಹಕ್ಕುಗಳ ಹಾಗು ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ಉಪಬಂಧಿಸಿವೆ; III ನೇ ಅಧ್ಯಾಯ ಪ್ರತಿಯೊಬ್ಬ ವ್ಯಾಪಾರಿಯಿಂದ ವಿಧಿಸಬೇಕಾದ ವ್ಯಾಪಾರಿ ಶುಲ್ಕಗಳಿಗೆ ಸಂಬಂಧಿಸಿದಂತೆ ಉಪಬಂಧಕಲ್ಪಿಸಿ 8ನೇ ಪ್ರಕರಣ ಬೀದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಹಾಗು ತೆರವುಗೊಳಿಸುವಿಕೆಗೆ ಸಂಬಂಧಿಸಿದ್ದಾಗಿದೆ; IV ನೇ ಅಧ್ಯಾಯದಲ್ಲಿನ ಉಪಬಂಧಗಳು; ವಿವಾದ ನಿರ್ಮೂಲನಾ ಕಾರ್ಯತಂತ್ರಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತವೆ; V ನೇ ಅಧ್ಯಾಯ ಪಟ್ಟಣ ವ್ಯಾಪಾರ ಸಮಿತಿ ಮುಂತಾದವುಗಳನ್ನು ರೂಪಿಸುವುದಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುವುದಾಗಿದೆ; VII ಅಧ್ಯಾಯದ ಸದರಿ ಅಧಿನಿಯಮದ ಕೆಲವು ಉಪಬಂಧಗಳು 03.03.2015ನೇ ದಿನಾಂಕದ ಅನುಬಂಧ–ಆರ್5 ರ ಮೇರೆಗೆ ಮಾನ್ಯ ಸರ್ವೋಚ್ಚ ನ್ಯಾಯಲಯವು ರಚಿಸಿದ ಸಮಿತಿಯು ರೂಪಿಸಿದ ಮಾರ್ಗದರ್ಶಿ ಸೂತ್ರಗಳ ನಿಬಂಧನೆಗಳಿಗನುಸಾರವಾಗಿ ಪಟ್ಟಣ ಅಥವಾ ನಗರಗಳ ಕಾನೂನು ಸುವ್ಯವಸ್ಥೆ ಹಾಗು ನೈರ್ಮಲ್ಯ ನಿರ್ವಹಣೆಯನ್ನು ಮಾಡುವಾಗ ಸಾರ್ವಜನಿಕ ಸ್ಥಳಗಳಲ್ಲಿ ಅವರಿಗೆ ಸ್ವಲ್ಪ ಸ್ಥಳವನ್ನು ಒದಗಿಸಿ, ಅವರ ವ್ಯಾಪಾರವನ್ನು ವಿನಿಯಮಿಸಲು ಪುರಸಭೆಯು ಅನುಸರಿಸಬೇಕೆಂಬ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ಸದರಿ ಅಧಿನಿಯಮತಿಯು ಪ್ರಯೋಜನಕಾರಿ ಶಾಸನವಾಗಿದೆಯೆಂಬುದನ್ನು ಸೂಚಿಸುತ್ತವೆ.

ಪಕ್ಷಕಾರರ ಪರ ಮಾನ್ಯ ವಕೀಲರು ಅಹವಾಲನ್ನು ಆಲಿಸಿ, ಈ ನ್ಯಾಯಾಲಯವು, 2014ರ ಅಧಿನಿಯಮದ ಉಪಬಂಧಗಳ ಮೂಲಕ ಅನುಪಾಲಿಸಲು ಹಾಗು ಅನುವರ್ತಿಸಲು ಪ್ರತ್ಯರ್ಜಿದಾರ ಪುರಸಭೆಗೆ ಯಾವುದೇ ಮ್ಯಾಂಡಮಸ್ ರಿಟ್ ಅಥವಾ ನಿರ್ದೇಶನವನ್ನು ನೀಡುವುದು, ನ್ಯಾಯಾಲಯದ ಯಾವುದೇ ಮ್ಯಾಂಡಮಸ್ ನಿರ್ದೇಶನವನ್ನು ಅಗತ್ಯಪಡಿಸುವುದು ತುಂಬಾ ವಿಸ್ತೃತ ಪ್ರಸ್ತಾಪವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ. ವಿಧಾನ ಮಂಡಲವು ಈಗಾಗಲೇ ಬೀದಿ ವ್ಯಾಪಾರಿಗಳ ಸೌಲಭ್ಯಕ್ಕೆ ಸಂಬಂಧಿಸಿದಂತೆ ಇಂಥ ಒಂದು ಅಧಿನಿಯಮವನ್ನು ಈಗಾಗಲೇ ಅಧಿನಿಯಮಿತಿಗೊಳಿಸಿದ್ದು, ಪ್ರತ್ಯರ್ಜಿದಾರ ಪುರಸಭೆಯು ಈ ಅಧಿನಿಯಮದ ಉಪಬಂಧಗಳನ್ನು ಅನುಪಾಲಿಸಲೂ ಸಹ ಬದ್ಧವಾಗಿರುತ್ತದೆಂದು ನಂಬಲು ಎಲ್ಲಾ

**ಕಾರಣಗಳಿರುತ್ತವೆ. ಈ ಅಧಿನಿಯಮದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ಅನ್ಯಥಾ ಈ ನ್ಯಾಯಾಲಯದ ಎದುರು ಸುಸ್ಥಾಪಿಸಲಾದ ನಿರ್ದಿಷ್ಟ ಘಟನೆಯ ಹೊರತು, ರಿಟ್ ಅಧಿಕಾರ ವ್ಯಾಪ್ತಿಯನ್ನು ಪ್ರಸ್ತುತ ಪ್ರಕರಣದಲ್ಲೂ ಸಹ ಮಾಡಲಾದ ಬೀಸು ವಾದಗಳ ಮೇಲೆ ಅನ್ವಯಿಸಲಾಗುವುದಿಲ್ಲ.**

**ಆದ್ದರಿಂದ, ಮೇಲೆ ಹೇಳಿದ ಅಭಿಪ್ರಾಯೋಕ್ತಿಗಳು, ನಿರ್ದೇಶನಗಳು ಹಾಗು ಸ್ವಾತಂತ್ರ್ಯದೊಂದಿಗೆ ಅರ್ಜಿದಾರರು ಅಂತೆಯೇ ಪ್ರತ್ಯರ್ಜಿದಾರರಿಗೂ ಮುಕ್ತವಾಗಿರಿಸಿ, ಈ ರಿಟ್ ಅರ್ಜಿಗಳನ್ನು ವಿಲೇ ಮಾಡಲಾಗಿದೆ.**

ಅರ್ಜಿದಾರರ ಪರವಾಗಿ : ಶ್ರೀ ಚಂದನ್ ಟಿ.ಜೆ., ವಕೀಲರು, ಇವರ ಪರವಾಗಿ
ಶ್ರೀ ಆರ್.ಎಸ್. ರವಿ, ವಕೀಲರು.
ಪ್ರತ್ಯರ್ಜಿದಾರರ ಪರವಾಗಿ : ಶ್ರೀ ಹೆಚ್.ಸಿ. ಶಿವರಾಮು, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಡಾ|| ವಿನೀತ್ ಕೊಠಾರಿ:**

1. ಈ ಎರಡೂ ರಿಟ್ ಅರ್ಜಿಗಳನ್ನು ಸಾಮಾನ್ಯ ಆದೇಶದ ಮೂಲಕ ವಿಲೆಮಾಡಲಾಗಿದೆ.

2. ಈ ಎರಡೂ ರಿಟ್ ಅರ್ಜಿಗಳಲ್ಲಿನ ಅರ್ಜಿದಾರರು, ತಾವು ಬೀದಿ ವ್ಯಾಪಾರಿಗಳಾಗಿದ್ದು, ಮೈಸೂರು ನಗರ ಪಾಲಿಕೆಯ ಸಾರ್ವಜನಿಕ ಸ್ಥಳಗಳಲ್ಲಿ ಸಣ್ಣದಾದ ತಾತ್ಕಾಲಿಕ ನಿರ್ಮಿತಿಗಳನ್ನು ಅಥವಾ ಷೆಡ್ಡುಗಳನ್ನು ನಿರ್ಮಿಸಿಕೊಂಡು ತಮ್ಮ ವ್ಯಾಪಾರವನ್ನು ಮಾಡುತ್ತಿರುತ್ತೇವೆ ಹಾಗು ಇತ್ತೀಚೆಗೆ ಅಧಿನಿಯಮಿತ ಗೊಳಿಸಿದ ಅಧಿನಿಯಮ ಅಂದರೆ ..., ಬೀದಿ ವ್ಯಾಪಾರಿಗಳು (ಜೀವನ ಸಂರಕ್ಷಣೆ ಹಾಗೂ ಬೀದಿ ವ್ಯಾಪಾರದ ವಿನಿಯಮ) ಅಧಿನಿಯಮ, 2014 ರಡಿಯಲ್ಲಿ ರಕ್ಷಣೆಗೆ

ಹಕ್ಕುಳ್ಳವರಾಗಿದ್ದು, ನಾವು ಬಡ ಸ್ವಉದ್ಯೋಗಿಗಳಾಗಿದ್ದು ನಮ್ಮ ದೈನಂದಿನ ವ್ಯಾಪಾರ ನಿರ್ವಹಣೆಯ ಸ್ಥಳದಿಂದ ಪ್ರತ್ಯರ್ಜಿದಾರ ಮೈಸೂರು ನಗರ ಪಾಲಿಕೆಯು ಆಗಾಗ ನಮ್ಮನ್ನು ಮೇಲೆ ಹೇಳಿದ ಸ್ಥಳಗಳಿಂದ ಹೊರಹಾಕುತ್ತಿರುತ್ತದೆಂಬ ಕ್ಲೇಮಿನೊಂದಿಗೆ ಅರ್ಜಿ ಸಲ್ಲಿಸಿರುತ್ತಾರೆ.

3. ಅರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀಯುತ ಆರ್.ಎಸ್. ರವಿಯವರು, ಹಲವಾರು ಮನವಿಗಳನ್ನು ಮಾಡಿದ್ದಾಗ್ಯೂ, ಪ್ರತ್ಯರ್ಜಿದಾರ ನಿಗಮದ ಪ್ರಾಧಿಕಾರಿಗಳು 2014ರ ಮೇಲೆ ಹೇಳಿದ ಅಧಿನಿಯಮದ ಉಪಬಂಧಗಳನ್ನು ಪಾಲಿಸಲು ವಿಫಲರಾಗಿರುತ್ತಾರೆ ಹಾಗೂ ಯಾವುದೇ ಪೂರ್ವ ನೋಟೀಸು ಅಥವಾ ಆದೇಶಗಳನ್ನು ನೀಡದೆ, ಅವರು ಬೆಲ್ಟುಗಳು, ಪರ್ಸುಗಳು, ಬಟ್ಟೆಗಳು ಮುಂತಾದ ಸಣ್ಣಪುಟ್ಟ ವಸ್ತುಗಳ ವ್ಯಾಪಾರ ಮಾಡುವ ಸ್ಥಳಗಳಿಗೆ ಭೇಟಿ ನೀಡಿ, ಮೈಸೂರು ನಗರದಲ್ಲಿನ ಗಾಂಧಿ ಚೌಕ, ನಗರ ಪಾಲಿಕೆ ಕಚೇರಿ ಹಾಗು ಇತರ ಬೇರೆ ಬೇರೆ ಸ್ಥಳಗಳಿಂದ ಅವರುಗಳನ್ನು ಒತ್ತಾಯ ಪೂರ್ವಕವಾಗಿ ಹೊರಹಾಕಿರುತ್ತಾರೆಂದು ವಾದಿಸಿರುತ್ತಾರೆ. ರಿಟ್ ಅರ್ಜಿಗಳಲ್ಲಿ ಮಾಡಿದ ಕೋರಿಕೆಗಳನ್ನು ಓದಿನ ಉಲ್ಲೇಖಕ್ಕೆ ಸಂಬಂಧಿಸಿದಂತೆ ಈ ಮುಂದೆ ಉದ್ಧರಿಸಲಾಗಿರುತ್ತದೆ.

**28461-462/2015 ರ ರಿಟ್ ಅರ್ಜಿಯಲ್ಲಿ**

ಎ. ಬೀದಿ ವ್ಯಾಪಾರಿಗಳು (ಜೀವನ ಸಂರಕ್ಷಣೆ ಹಾಗು ಬೀದಿ ವ್ಯಾಪಾರ ವಿನಿಯಮನ) ಅಧಿನಿಯಮ, 2015 ರ ಮೇರೆಗೆ ಬೀದಿ ವ್ಯಾಪಾರಿಗಳನ್ನು ಮರುವ್ಯವಸ್ಥೆ ಕಲ್ಪಿಸುವ ಅಥವ ತೆರವುಗೊಳಿಸುವ ಹಿನ್ನಲೆಯಲ್ಲಿ ಪಟ್ಟಣ ಮಾರಾಟ ಸಮಿತಿಯನ್ನು ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲು ಹಾಗೂ ಬೀದಿ ವ್ಯಾಪಾರಿಗಳ ವೃತ್ತಿಯನ್ನು ಮೇಲ್ದರ್ಜೆಗೇರಿಸಲು, ಬೀದಿ ವ್ಯಾಪಾರಕ್ಕೆ ಸಂಬಂಧಿಸಿದ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಲು ಪ್ರತ್ಯರ್ಜಿದಾರರಿಗೆ ನಿರ್ದೇಶಿಸಿ ಮ್ಯಾಂಡಮಾಸ್ ರಿಟ್ ಅನ್ನು ಹೊರಡಿಸುವುದು;

ಬಿ. ಬೀದಿ ವ್ಯಾಪಾರಿಗಳು (ಜೀವನ ಸಂರಕ್ಷಣೆ ಹಾಗು ಬೀದಿ ವ್ಯಾಪಾರದ ವಿನಿಯಮನ) ಅಧಿನಿಯಮ, 2014 ರಲ್ಲಿ ಉದ್ದೇಶಿಸಿರುವ ಕಾರ್ಯ ವಿಧಾನವನ್ನು ಅನುಸರಿಸದೆ ಮೈಸೂರಿನ ಗಾಂಧಿ ಚೌಕದಲ್ಲಿನ ಅವರ ವ್ಯಾಪಾರದ ಸ್ಥಳದಿಂದ ಅರ್ಜಿದಾರರನ್ನು ತೆರವುಗೊಳಸದಿರಲು ಪ್ರತ್ಯರ್ಜಿದಾರರಿಗೆ ನಿರ್ದೇಶಿಸಿ ಮ್ಯಾಂಡಮಾಸ್ ರಿಟ್ ಅನ್ನು ಹೊರಡಿಸುವುದು;

ಸಿ. ಮೇಲಿನ ಪ್ರಕರಣಗಳ ವಾಸ್ತವಾಂಶಗಳಲ್ಲಿ ಹಾಗು ಸಂದರ್ಭಗಳಲ್ಲಿ ನೀಡಲು ಯುಕ್ತವೆಂದು ಮಾನ್ಯ ಈ ನ್ಯಾಯಾಲಯವು ಭಾವಿಸಿದಂಥ ಇತರೆ ಪರಿಹಾರ ಅಥವಾ ಪರಿಹಾರಗಳನ್ನು ನೀಡುವುದು;

**43960–44030/2015 ರ ರಿಟ್ ಅರ್ಜಿಗಳಲ್ಲಿ**

ಎ. ಬೀದಿ ವ್ಯಾಪಾರಿಗಳು (ಜೀವನ ಸಂರಕ್ಷಣೆ ಹಾಗು ಬೀದಿ ವ್ಯಾಪಾರದ ವಿನಿಯಮನ) ಅಧಿನಿಯಮ, 2014 ರಲ್ಲಿ ಉದ್ದೇಶಿಸಿರುವ ಕಾರ್ಯವಿಧಾನವನ್ನು ಅನುಸರಿಸದೆ ಮೈಸೂರಿನ ಗಾಂಧಿಚೌಕದ ಬಳಿ ಟೆಂಪೊ ನಿಲ್ದಾಣ ತೆರವುಗೊಳಿಸದೆ ಪ್ರತ್ಯರ್ಜಿದಾರರನ್ನು ನಿರ್ದೇಶಿಸುವ ಮ್ಯಾಂಡಮಸ್ ರಿಟ್ ಅನ್ನು ಹೊರಡಿಸುವುದು;

ಬಿ. ಮೇಲಿನ ಪ್ರಕರಣಗಳ ವಾಸ್ತವಾಂಶಗಳಲ್ಲಿ ಹಾಗು ಸಂದರ್ಭಗಳಲ್ಲಿ ಮಾನ್ಯ ನ್ಯಾಯಾಲಯವು ನೀಡಲು ಯುಕ್ತವೆಂದು ಭಾವಿಸಿದಂಥ ಇತರೆ ಪರಿಹಾರ ಅಥವಾ ಪರಿಹಾರಗಳನ್ನು ನೀಡುವುದು.

4. ಪ್ರಸ್ತುತ ರಿಟ್ ಅರ್ಜಿಗಳನ್ನು ಪುರಸ್ಕರಿಸುವಾಗ, ಈ ನ್ಯಾಯಾಲಯದ ಸಮನ್ವಯ ಪೀಠವು 13.07.2015 ರಂದು ನಂತರದ ದಿನಾಂಕದವರೆಗೆ ಯಥಾ ಸ್ಥಿತಿಯನ್ನು ಮುಂದುವರೆಸಲು ಪಕ್ಷಕಾರರಿಗೆ ನಿರ್ದೇಶಿಸಲಾಗಿರುತ್ತದೆ. ಆದರೆ ಮಧ್ಯಕಾಲಿನ ಆದೇಶವು, ಐಎ 2/2015ನ್ನು ಒಪ್ಪಿಕೊಳ್ಳುವಾಗ 09.03.2016ರಂದು ಉಭಯ ಪಕ್ಷಕಾರರನ್ನು ಸುನಾವಣೆಮಾಡಿದ ತರುವಾಯ ತೆರವುಗೊಳಿಸಬೇಕಾಗಿರುತ್ತದೆ.

5. ಪ್ರತ್ಯರ್ಜಿದಾರ ನಿಗಮದ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀಯುತ ಹೆಚ್.ಸಿ. ಶಿವರಾಮುರವರು, ಅವರು ಸಲ್ಲಿಸಿದ ಆಕ್ಷೇಪಣೆಗಳ ವಿವರಪಟ್ಟಿಯನ್ನು ಉಲ್ಲೇಖಿಸಿ, ಅಲ್ಲದೆ, 2014 ರ ಮೇಲೆ ಹೇಳಿದ ಅಧಿನಿಯಮದ ಉಪಬಂಧಗಳನ್ನು ಈಗಾಗಲೇ ಅನುಸರಿಸಿದ್ದು, ಪ್ರತಿ ವಲಯ ಅಥವಾ ವಾರ್ಡ್‌ಗೆ ಸಂಬಂಧಿಸಿದ ಪಟ್ಟಣ ಮಾರಾಟ ಸಮಿತಿಯನ್ನು ರಚಿಸಲಾಗಿರುತ್ತದೆಂದೂ ಸಹ ನಿವೇದಿಸಿರುತ್ತಾರೆ. ಸದರಿ ಸಮಿತಿಯ ಅಧ್ಯಕ್ಷರಾಗಿ ಮೈಸೂರು ನಗರ ಪಾಲಿಕೆ ಆಯುಕ್ತರು ಮತ್ತು ಇತರ ಸದಸ್ಯರಾಗಿ ಮೇಯರ್, ಆಯುಕ್ತರು, ಉಪ–ಪೊಲೀಸ್ ಆಯುಕ್ತರು, ಪಟ್ಟಣ ಯೋಜನೆಯ ಜಂಟಿ ನಿರ್ದೇಶಕರು, ಕಂದಾಯ ಅಧಿಕಾರಿ, ಸರ್ಕಾರೇತರ ಸಂಘ ಸಂಸ್ಥೆಯ ಕೆಲವು ಸದಸ್ಯರು ಹಾಗು ಸುಮಾರು ಎಂಟು ಜನ ನೋಂದಾಯಿತ ಬೀದಿ ವ್ಯಾಪಾರಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿರುವುದನ್ನು 30.06.2014 ರ ಅನುಬಂಧ–ಆರ್6 ಸಂಬಂಧದಲ್ಲಿ ಈ ನ್ಯಾಯಾಲಯದ ಗಮನವನ್ನು ಸೆಳೆದಿರುತ್ತಾರೆ. ಅಲ್ಲದೆ ದಿನಾಂಕ 09.03.2016 ರಂದಿನ ಮಧ್ಯಂತರ ಆದೇಶದ ರದ್ಧತಿಯ ತರುವಾಯ, ಸದರಿ ಅಧಿನಿಯಮದ ಉಪಬಂಧಗಳು ಅಥವಾ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1964 ರ ಉಪಬಂಧಗಳಡಿಯಲ್ಲಿನ ಯಾವುದೇ ನೋಂದಣಿ ಅಥವಾ ಪರವಾನಿಗೆಯನ್ನು ಹೊಂದಿರದಂಥ ಅರ್ಜಿದಾರರ ಬೀದಿ ವ್ಯಾಪಾರಿಗಳ ಕೋರಿಕೆ ಸಂ.(ಎ) ಯು ಊರ್ಜಿತವಾಗಿರುವುದಿಲ್ಲ. ಅಲ್ಲದೆ ಇವರು, ಅರ್ಜಿದಾರರು, ಯಾವುದೇ ವಿಷಯದಲ್ಲಿ ಕುಂದುಕೊರತೆಯನ್ನು ಹೊಂದಿದ್ದಲ್ಲಿ, ಕಾನೂನಿಗನುಸಾರವಾಗಿ ಪರಿಗಣಿಸಬಹುದಾದಂಥ ಮನವಿಗಳ ಮೂಲಕ ಪ್ರತ್ಯರ್ಜಿದಾರ ಪುರಸಭೆಯನ್ನು ಅವರು ಸಂದಿಸಬಹುದೆಂದು ನಿವೇದಿಸಿಕೊಂಡಿರುತ್ತಾರೆ.

6. ಅಲ್ಲದೆ, ರಾಜ್ಯ ಸಮಾಜ ರಕ್ಷಣ ವೇದಿಕೆಯ ಅಧ್ಯಕ್ಷರಾಗಿರುವ ಶ್ರೀಯುತ. ಆಯುಬ್ ಖಾನ್ ರವರು ಬೀದಿ ವ್ಯಾಪಾರಿಗಳು ಅಧಿನಿಯಮದ ಉಪಬಂಧಗಳಡಿಯಲ್ಲಿ ಹೇಳಲಾದಂತೆ ಸೂಕ್ತ ಪರವಾನಿಗೆ ಹಾಗು ನೋಂದಣಿ ಮಾಡಿಸಿಕೊಳ್ಳದೆ ಸಾರ್ವಜನಿಕ ಸ್ಥಳಗಳಲ್ಲಿ ಅರ್ಜಿದಾರರು ವ್ಯಾಪಾರವನ್ನು ಕುಳಿತುಕೊಂಡು ಮಾಡಲು ಪ್ರಸ್ತುತ ಅವರನ್ನು ಅನಧಿಕೃತವಾಗಿ ಅನುಮತಿಸಿದ್ದಾರೆಂದೂ, ಅಲ್ಲದೆ ಈ ಸಂಬಂಧದಲ್ಲಿ ಅಗತ್ಯಪಡಿಸಿದ ಉಪ–ವಿಧಿಗಳು ಹಾಗು ಷರತ್ತುಗಳನ್ನು ಪಾಲಿಸದೆ ಸದರಿ ಸ್ಥಳದಲ್ಲಿನ ವ್ಯಾಪಾರವನ್ನು ನಿರ್ವಹಿಸಲು ಅವರುಗಳು ಯಾವುದೇ ಕಾನೂನಾತ್ಮಕ ಹಕ್ಕನ್ನು ಹೊಂದಿರುವುದಿಲ್ಲವೆಂದೂ ನಿವೇದಿಸಿಕೊಂಡಿರುತ್ತಾರೆ.

7. ನಾನು ಸ್ವಲ್ಪ ದೀರ್ಘವಾಗಿಯೇ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿರುತ್ತೇನೆ ಹಾಗು ದಾಖಲೆಗಳನ್ನು ಹಾಗು 2014ರ ಮೇಲೆ ಹೇಳಿದ ಅಧಿನಿಯಮದ ಉಪಬಂಧಗಳನ್ನು ಪರಿಶೀಲಿಸಿರುತ್ತೇನೆ.

8. 2014ರ ಸದರಿ ಅಧಿನಿಯಮದ ಪ್ರಸ್ತಾವನೆ, ಉದ್ದೇಶ ಹಾಗು ಕಾರಣಗಳ ಹೇಳಿಕೆ ಹಾಗು ಸದರಿ ಅಧಿನಿಯಮದ ಹಲವು ಉಪಬಂಧಗಳು 'ಬೀದಿ ವ್ಯಾಪಾರಿಗಳ' ಪರಿಭಾಷೆಯನ್ನು ವಿವರಿಸುತ್ತವೆ; IIನೇ ಅಧ್ಯಾಯದಲ್ಲಿನ 3 ಹಾಗು 4ನೇ ಪ್ರಕರಣಗಳು; ಬೀದಿ ವ್ಯಾಪಾರಿಗಳ ಹಕ್ಕುಗಳ ಹಾಗು ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ಉಪಬಂಧಿಸಿವೆ; IIIನೇ ಅಧ್ಯಾಯ ಪ್ರತಿಯೊಬ್ಬ ವ್ಯಾಪಾರಿಯಿಂದ ವಿಧಿಸಬೇಕಾದ ವ್ಯಾಪಾರಿ ಶುಲ್ಕಗಳಿಗೆ ಸಂಬಂಧಿಸಿದಂತೆ ಉಪಬಂಧಕಲ್ಪಿಸಿದೆ 8ನೇ ಪ್ರಕರಣ ಬೀದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಹಾಗು ತೆರವುಗೊಳಿಸುವಿಕೆಗೆ ಸಂಬಂಧಿಸಿದ್ದಾಗಿದೆ; IVನೇ ಅಧ್ಯಾಯದಲ್ಲಿನ ಉಪಬಂಧಗಳು ವಿವಾದ ನಿರ್ಮೂಲನಾ ಕಾರ್ಯತಂತ್ರಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತವೆ; Vನೇ ಅಧ್ಯಾಯ ಪಟ್ಟಣ ವ್ಯಾಪಾರ ಸಮಿತಿ ಮುಂತಾದವುಗಳನ್ನು ರೂಪಿಸುವುದಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುವುದಾಗಿದೆ; VII ಅಧ್ಯಾಯದ ಸದರಿ ಅಧಿನಿಯಮದ ಕೆಲವು ಉಪಬಂಧಗಳು 03.03.2015ನೇ ದಿನಾಂಕದ ಅನುಬಂಧ–ಆರ್5ರ ಮೇರೆಗೆ ಮಾನ್ಯ ಸರ್ವೋಚ್ಚ ನ್ಯಾಯಲಯವು ರಚಿಸಿದ ಸಮಿತಿಯು ರೂಪಿಸಿದ ಮಾರ್ಗದರ್ಶಿ

ಸೂತ್ರಗಳ ನಿಬಂಧನೆಗಳಿಗನುಸಾರವಾಗಿ ಪಟ್ಟಣ ಅಥವಾ ನಗರಗಳ ಕಾನೂನು ಸುವ್ಯವಸ್ಥೆ ಹಾಗೂ ನೈರ್ಮಲ್ಯ ನಿರ್ವಹಣೆಯನ್ನು ಮಾಡುವಾಗ ಸಾರ್ವಜನಿಕ ಸ್ಥಳಗಳಲ್ಲಿ ಅವರಿಗೆ ಸ್ವಲ್ಪ ಸ್ಥಳವನ್ನು ಒದಗಿಸಿ, ಅವರ ವ್ಯಾಪಾರವನ್ನು ವಿನಿಯಮಿಸಲು ಪುರಸಭೆಯು ಅನುಸರಿಸಬೇಕೆಂಬ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ಸದರಿ ಅಧಿನಿಯಮಿತಿಯು ಪ್ರಯೋಜನಕಾರಿ ಶಾಸನವಾಗಿದೆಯೆಂಬುದನ್ನು ಸೂಚಿಸುತ್ತದೆ.

9. ಪ್ರತ್ಯರ್ಜಿದಾರ ನಿಗಮದ ಪರ ಮಾನ್ಯ ವಕೀಲರು 2014 ರ ಅಧಿನಿಯಮದ ಈ ನಿರ್ದೇಶನಗಳು ಹಾಗು ಉಪಬಂಧಗಳ ಅರ್ಥಾನುಸಾರವಾಗಿ, 2014ರ ಅಧಿನಿಯಮದ 22ನೇ ಪ್ರಕರಣದ ನಿಬಂಧನೆಗಳಿಗನುಸಾರವಾಗಿ ಪಟ್ಟಣ ಮಾರಾಟ ಸಮಿತಿಯನ್ನು ಮಾತ್ರ ರಚಿಸದೆ, ನಿಯಮಗಳಿಗನುಸಾರವಾಗಿ ಸದರಿ ಅಧಿನಿಯಮದಡಿಯಲ್ಲಿ ಸೂಕ್ತ ಪರವಾನಿಗೆಯನ್ನು ಕೊಡುವುದಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಅರ್ಜಿಯನ್ನು ಸಹ ಸಲ್ಲಿಸಬೇಕಾಗಿರುತ್ತದೆ.

10. ಪಕ್ಷಕಾರರ ಪರ ಮಾನ್ಯ ವಕೀಲರು ಅಹವಾಲನ್ನು ಆಲಿಸಿ, ಈ ನ್ಯಾಯಾಲಯವು, 2014 ರ ಅಧಿನಿಯಮದ ಉಪಬಂಧಗಳ ಮೂಲಕ ಅನುಪಾಲಿಸಲು ಹಾಗು ಅನುವರ್ತಿಸಲು ಪ್ರತ್ಯರ್ಜಿದಾರ ಪುರಸಭೆಗೆ ಯಾವುದೇ ಮ್ಯಾಂಡಮಸ್ ರಿಟ್ ಅಥವಾ ನಿರ್ದೇಶನವನ್ನು ನೀಡುವುದು, ನ್ಯಾಯಾಲಯದ ಯಾವುದೇ ಮ್ಯಾಂಡಮಸ್ ನಿರ್ದೇಶನವನ್ನು ಅಗತ್ಯಪಡಿಸುವುದು ತುಂಬಾ ವಿಸ್ತೃತ ಪ್ರಸ್ತಾಪವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ. ವಿಧಾನ ಮಂಡಲವು ಈಗಾಗಲೇ ಬೀದಿ ವ್ಯಾಪಾರಿಗಳ ಸೌಲಭ್ಯಕ್ಕೆ ಸಂಬಂಧಿಸಿದಂತೆ ಇಂಥ ಒಂದು ಅಧಿನಿಯಮವನ್ನು ಈಗಾಗಲೇ ಅಧಿನಿಯಮಿತಿಗೊಳಿಸಿದ್ದು, ಪ್ರತ್ಯರ್ಜಿದಾರ ಪುರಸಭೆಯು ಈ ಅಧಿನಿಯಮದ ಉಪಬಂಧಗಳನ್ನು ಅನುಪಾಲಿಸಲೂ ಸಹ ಬದ್ಧವಾಗಿರುತ್ತದೆಂದು ನಂಬಲು ಎಲ್ಲಾ ಕಾರಣಗಳಿರುತ್ತವೆ. ಈ ಅಧಿನಿಯಮದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ಅನ್ಯಥಾ ಈ ನ್ಯಾಯಾಲಯದ ಎದುರು ಸುಸ್ಥಾಪಿಸಲಾದ ನಿರ್ದಿಷ್ಟ ಘಟನೆಯ ಹೊರತು, ರಿಟ್ ಅಧಿಕಾರವ್ಯಾಪ್ತಿಯನ್ನು ಪ್ರಸ್ತುತ ಪ್ರಕರಣದಲ್ಲೂ ಸಹ ಮಾಡಲಾದ ಬೀಸು ವಾದಗಳ ಮೇಲೆ ಅನ್ವಯಿಸಲಾಗುವುದಿಲ್ಲ.

11. ರಿಟ್ ಅರ್ಜಿಗಳ 4 ನೇ ಕಂಡಿಕೆಯು ಇದರ ಸೂಕ್ತತೆಯ ಮಟ್ಟಿಗೆ, ಪ್ರತ್ಯರ್ಜಿದಾರ ಪಾಲಿಕೆ ಸಿಬ್ಬಂದಿ ವರ್ಗದವರು ಅರ್ಜಿದಾರರು ವ್ಯಾಪಾರ ಮಾಡುವ ಸ್ಥಳಕ್ಕೆ ಆಗಾಗ ಭೇಟಿ ನೀಡುತ್ತಾ, ಇವರಿಗೂ ಇವರ ಸಹ–ವ್ಯಾಪಾರಸ್ಥರಿಗು ಅಂಗಡಿಗಳನ್ನು ಖಾಲಿಮಾಡಿಸುವ ಕುರಿತು ಬೆದರಿಕೆಯೊಡ್ಡುತ್ತಲೇ ಇದ್ದರು ಎಂಬುದನ್ನು ಸಹ ಪ್ರಸ್ತಾಪಿಸುತ್ತದೆ. ಅರ್ಜಿದಾರರನ್ನು ಯಾವಾಗ, ಎಲ್ಲಿ ಹಾಗು ಯಾರು ಭೇಟಿ ಮಾಡಿದರು ಅಥವಾ ಅಂಗಡಿಗಳನ್ನು ತೆರವುಗೊಳಿಸಿದರು ಎಂಬುದನ್ನು ಸ್ಪಷ್ಟ ನಿರ್ದಿಷ್ಟಪಡಿಸಿರುವುದಿಲ್ಲ. ಪ್ರತ್ಯರ್ಜಿದಾರ ಮೈಸೂರು ನಗರ ಪಾಲಿಕೆಯ ಆಯುಕ್ತರಿಗೆ 30.06.2015 ರಂದು 'ಸಿ' ಅನುಬಂಧದ ಮೇರೆಗೆ ಸಂಘದ ಪರವಾಗಿ ಕೆಲವು ಮನವಿಗಳನ್ನು ಮಾಡಲಾಗಿದೆಯೆಂಬುದು ಕಂಡುಬಂದಿದ್ದಾಗ್ಯೂ, ಅವುಗಳು ನಿರೀಕ್ಷಿಸಿದಂತೆಯೇ ಅಸ್ಪಷ್ಟವಾಗಿಯೂ ಇವೆ ಎಂಬುದು ವಾಸ್ತವ ವಿಚಾರವಾಗಿರುತ್ತದೆ. ಈ ನ್ಯಾಯಾಲಯವು, ಅರ್ಜಿದಾರರು ಬಡವರು, ಅಲ್ಪಕಾಲೀನ ವ್ಯಾಪಾರಸ್ಥರು ಹಾಗು ಕರಾರುವಕ್ಕಾಗಿ ಕಾನೂನನ್ನು ಅಳವಡಿಸಿಕೊಳ್ಳಲು ತಕ್ಕ ವಿದ್ಯಾರ್ಹತೆಯನ್ನು ಹೊಂದಿಲ್ಲದವರು ಆಗಿರುತ್ತಾರೆಂಬ ವಾಸ್ತವಾಂಶಗಳಲ್ಲಿ ಅರಿವನ್ನು ಹೊಂದಿತ್ತು. ಆದಾಗ್ಯೂ, ಅರ್ಜಿದಾರರಿಗೆ, ಕಾನೂನಿನ ಯಾವುದೇ ಉಪಬಂಧವನ್ನು ಪಾಲಿಸದೆ ಅಂಥ ಸ್ಥಳಗಳನ್ನು ಅವರ ವ್ಯಾಪಾರವನ್ನು ನಡೆಸಲು ಅವರಿಗೆ ಅನುಮತಿಸುವುದನ್ನಾಗಲಿ ಇಲ್ಲವೇ, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಒತ್ತಾಯ ಪೂರ್ವಕ ಅಧಿಭೋಗವನ್ನು ಹೊಂದಲು ಅನುಮತಿಸಲಾಗುವುದಿಲ್ಲ. ದೇಶದ ಯಾರೇ ಇತರೆ ನಾಗರಿಕರಂತೆ, ಸಂವಿಧಾನದ 19(1)(ಜಿ) ಅನುಚ್ಛೇದಗಳಡಿಯಲ್ಲಿ ಖಾತರಿಪಡಿಸಿದ ವ್ಯವಹಾರ ಅಥವಾ ವೃತ್ತಿಯನ್ನು ನಿರ್ವಹಿಸಲು ಮೂಲಭೂತ ಹಕ್ಕನ್ನು ಕ್ಲೇಮುಮಾಡಲು, ಅವರೂ ಸಹ ಸೂಕ್ತ ಕಾನೂನುಗಳು, ಷರತ್ತುಗಳು ಹಾಗು ಉಪ–ವಿಧಿಗಳ ರೂಪದಲ್ಲಿ ಯುಕ್ತ ನಿರ್ಬಂಧಗಳಿಗೆ ಸಮಾನವಾಗಿ ಒಳಗೊಂಡಿರಬೇಕಾಗಿರುತ್ತದೆ. ಈ ನ್ಯಾಯಾಲಯಕ್ಕೆ 2014 ರ ಅಧಿನಿಯಮದ ಉಪಬಂಧಗಳಲ್ಲಿ ಅನುಪಾಲನೆಗೆ ಪ್ರತ್ಯರ್ಜಿದಾರ ನಗರ ಪಾಲಿಕೆಯನ್ನು ನಿರ್ದೇಶಿಸಲು ದಾಖಲೆಯ ಮೇಲೆ ಯಾವುದೇ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿರುವುದಿಲ್ಲ. ಹಾಗಿಲ್ಲದಿದ್ದರೂ ಸದರಿ ಕಾನೂನನ್ನು ಒಮ್ಮೆ ನಿರೂಪಿಸಿದ ಮೇಲೆ ರಾಜ್ಯ

ವಿಧಾನಮಂಡಲವು ಅಧಿನಿಯಮಿಸಿದ ಪರಿನಿಯಮದ ಪುಸ್ತಕದ ಮೇಲೆ ಕಾನೂನಿನಲ್ಲಿರುವಂತೆ ಅವರನ್ನು ಹಾಗೆಯೇ ನಡೆದುಕೊಳ್ಳುವಂತೆ ನಿರೀಕ್ಷಿಸಲಾಗುತ್ತದೆ.

12. ನಿರ್ದಿಷ್ಟ ವ್ಯಕ್ತಿ ಅಥವಾ ಅಲ್ಪಕಾಲೀನ ಬೀದಿ ವ್ಯಾಪಾರಿಗಳ ಸಂಘದ ಸದಸ್ಯರುಗಳ ಕುಂದುಕೊರತೆಯ ನಿವಾರಣೆಗೆ ಸಂಬಂಧಪಡುವಷ್ಟರ ಮಟ್ಟಿಗೆ, 2014ರ ಅಧಿನಿಯಮದ ನಿಬಂಧನೆಗಳಲ್ಲಿ ಹಾಗು ಕರ್ನಾಟಕ ಪುರಸಭಾ ಅಧಿನಿಯಮ, 1964ರ ಇತರೆ ಸೂಕ್ತ ಉಪಬಂಧಗಳು, ಅದರಡಿಯಲ್ಲಿನ ನಿಯಮಗಳು ಹಾಗು ಉಪ–ವಿಧಿಗಳ ನಿಬಂಧನೆಗಳಲ್ಲಿ ಪ್ರತ್ಯರ್ಜಿದಾರ ನಗರ ಪಾಲಿಕೆಯು ವಿಧಿಸಬಹುದಾದಂಥ ಪರವಾನಿಗೆಯ ಷರತ್ತುಗಳನ್ನು ಪಾಲಿಸುವುದು ಹಾಗು ಶುಲ್ಕಗಳ ಸಂದಾಯಕ್ಕೆ ಒಳಪಟ್ಟು ನಿಯೋಜಿತ ಸ್ಥಳದಲ್ಲಿ ಅವರ ಬೀದಿ ವ್ಯಾಪಾರಗಳನ್ನು ನಿರ್ವಹಿಸಲು ಸೂಕ್ತ ಪರವಾನಿಗೆ ಹಾಗು ಅನುಮತಿಯನ್ನು ಕೋರಲು ಪ್ರತ್ಯರ್ಜಿದಾರ ನಗರ ಪಾಲಿಕೆಯನ್ನು ಭೇಟಿ ಮಾಡುವಷ್ಟು ಮುಕ್ತತೆಯನ್ನು ಈ ಅರ್ಜಿದಾರರು ಹೊಂದಿರುತ್ತಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿರುತ್ತದೆ.

13. ಆದ್ದರಿಂದ, ಮೇಲೆ ಹೇಳಿದ ಅಭಿಪ್ರಾಯೋಕ್ತಿಗಳು, ನಿರ್ದೇಶನಗಳು ಹಾಗು ಸ್ವಾತಂತ್ರ್ಯದೊಂದಿಗೆ ಅರ್ಜಿದಾರರು ಅಂತೆಯೇ ಪ್ರತ್ಯರ್ಜಿದಾರರಿಗೂ ಮುಕ್ತವಾಗಿರಿಸಿ, ಈ ರಿಟ್ ಅರ್ಜಿಗಳನ್ನು ವಿಲೇ ಮಾಡಲಾಗಿದ್ದು, ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.